ಸರ್ಕಾರದ ಇಲಾಖೆಯಲ್ಲಿ ಆರ್ ಡಿ ಐ 57, ಎಲ್ ಜಿ ಐ 97ರ ಪ್ರಕಾರ ಇಲ್ಲಿ ಕಡತ ಬಾಕಿ ಇದೆ. ಆದಕಾರಣ ದಯವಿಟ್ಟು ಈ ನೌಕರರಿಗೆ ತಕ್ಷಣ ನಿವೇಶನ ಕೊಡುವ ವ್ಯವಸ್ಥೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ : ಸನ್ಮಾನ್ಯ ಸಭಾಧ್ಯಕ್ಷರೆ, ಇಲ್ಲಿರುವಂತಹ ವಿಚಾರ ಸರ್ಕಾರ ವಾಹನ ಚಾಲಕರ ಸಂಘದ ಸದಸ್ಯರಿಗೆ ನಿವೇಶನಗಳಿಗೆ ಸಂಬಂಧಪಟ್ಟಿರುವಂಥದ್ದು, ವಿಭಾಗಾಧಿಕಾರಿಗಳು ಸಹ ಇದನ್ನು ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಕಳುಹಿಸಿದ್ದಾರೆ. ಇದು ರೆವಿನ್ಯೂ ಇಲಾಖೆಯಲ್ಲಿ ಇದೆ, ಇದಕ್ಕೆ ಇನ್ನು ಮಂಜೂರಾತಿಯನ್ನು ಕೊಟ್ಟಿಲ್ಲ ಎನ್ನುವ ವಿಚಾರ ತಿಳಿದು ಬಂದಿದೆ, ಇದರ ಬಗ್ಗೆ ಸರ್ಕಾರ ಗಮನ ಹರಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತದೆ.

ಊ) ಹುಬ್ಬಳ್ಳಿ - ಧಾರವಾಡ ಮಹಾನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಸಭಾಧ್ಯಕ್ಷರೆ, ಹುಬ್ಬಳ್ಳಿ - ಧಾರವಾಡ ಮಹಾ ನಗರದಲ್ಲಿ ಕುಡಿಯುವ ನೀರಿನ ಹಾಹಾಕಾರ ತಲೆದೋರಿದೆ. ನೀರಸಾಗರ ಮತ್ತು ಮಲಪ್ರಭಾ ಜಲಾಶಯದಿಂದ 7 ಎಂಜಿಡಿ ಮತ್ತು 11 ಎಂಜಿಡಿ ನೀರು ಪೂರೈಕೆಯಾಗುತ್ತಿದ್ದರೂ ಸಹ ಇವತ್ತಿನ ದಿವಸ ವಿತರಣಾ ವ್ಯವಸ್ಥೆಯಲ್ಲಿ ನೀರನ್ನು ಸರಿಯಾಗಿ ವಿತರಣೆ ಮಾಡದೇ ಇರುವುದರಿಂದ ಮತ್ತು ವಿದ್ಯುಚ್ಛಕ್ತಿಯ ಅಭಾವದಿಂದ , ಹಾಗೂ ಕಡಿತದಿಂದ ಅಲ್ಲಲ್ಲಿ ಕೊಳವೆಯಿಂದ ನೀರು ಸೋರಿ ಹೋಗುತ್ತಿರುವುದರಿಂದ ಇವತ್ತಿನ ದಿವಸ ಈ ನೀರಿನ ತೊಂದರೆ ಉಂಟಾಗಿದೆ. ಆದಕಾರಣ ತಾವು ದಯವಿಟ್ಟು ಇದರ ಬಗ್ಗೆ ಗಮನ ಹರಿಸಬೇಕು. ಏಕೆಂದರೆ ಇವತ್ತಿನ ದಿವಸ ರಸ್ತಾರೋಕೋ ನಗರದಲ್ಲಿ ನಡೆಯುತ್ತಿದೆ. ಮತ್ತೊಂದು ವಿಷಯವೇನೆಂದರೆ, ಈಗಿನ ವ್ಯವಸ್ಥೆಗೆ ಒಂದನೇ ಯೋಜನೆ ಮತ್ತು ಎರಡನೆ ಯೋಜನೆ ಮುಗಿದಿದೆ, ಮೂರನೆ ಹಂತದ ಯೋಜನೆಯನ್ನು 120 ಕೋಟಿ ರೂ.ಗಳ ವೆಚ್ಚದಲ್ಲಿ ತೀವ್ರಗತಿಯಿಂದ ಸರ್ಕಾರ ತೆಗೆದುಕೊಂಡರೆ ಖಾಯಂ ಆಗಿ ನೀರಿನ ಆಹಾಕಾರವನ್ನು ಪರಿಹರಿಸಬಹುದು. ಆದಕಾರಣ ಸರ್ಕಾರ ಇದರ ಬಗ್ಗೆ ಗಮನ ಹರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ : ಸರ್ಕಾರ ಈಗಾಗಲೇ ಇದರ ಬಗ್ಗೆ ಕ್ರಮ ಕೈಗೊಂಡಿರುವುದು. ತಮ್ಮ ಗಮನಕ್ಕೆ ಬಂದಿರಬಹುದು. ಮೂರನೆ ಯೋಜನೆಯನ್ನು ತಾವು ತೆಗೆದುಕೊಳ್ಳಬೇಕಾಗಿದೆ. ಇದಕ್ಕೆ ತಕ್ಕಂತಹ ಹಣವನ್ನು ತಾವು ಒದಗಿಸಬೇಕಾಗುತ್ತದೆ. ಆದಕಾರಣ ಇದರ ಬಗ್ಗೆ ತ್ವರಿತ ಗತಿಯಲ್ಲಿ ಕೆಲಸ ಮಾಡಬೇಕಾಗುತ್ತದೆ ಮಾಡೋಣ. ಆದರೆ ನಾವು ಇಷ್ಟೇ ಅವಧಿಯಲ್ಲಿ ಮಾಡುತ್ತೇವೆ ಎಂದು ಹೇಳುವುದಿಲ್ಲ, ಏಕೆಂದರೆ, ಹಣದ ಸಂಪನ್ಮೂಲವನ್ನು ನೋಡಿಕೊಂಡು ಕೆಲಸ ಮಾಡಬೇಕು, ಆ ಹಿನ್ನೆಲೆಯನ್ನು ನೋಡಿಕೊಂಡು ಕ್ರಮ ಕೈಗೊಳ್ಳುತ್ತೇವೆ.

ಎ) ಮೈಸೂರಿನ ಮೆಟ್ರೋಪೋಲ್ ಹೋಟೆಲ್‌ನ್ನು ಖಾಸಗಿಯವರಿಗೆ ನೀಡದೇ ಇರಲು ಕ್ರಮ ಕೈಗೊಳ್ಳುವ ಬಗ್ಗೆ

ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ : ಸನ್ಮಾನ್ಯ ಅಧ್ಯಕ್ಷರೆ, ಮೈಸೂರಿನ ಮೆಟ್ರೋಪೋಲ್ ಹೋಟೆಲ್ ಇಂದು ವಿವಾದಾತ್ಮಕ ಸ್ಥಿತಿಯಲ್ಲಿ ಇದೆ. ಮೊದಲು ಸರ್ಕಾರ ಈ ಹೋಟೆಲನ್ನು ಖಾಸಗಿಯವರಿಗೆ ಕೊಟ್ಟು ಲಕ್ಷಾಂತರ ರೂಪಾಯಿ ಕೈಸುಟ್ಟುಕೊಂಡಿದೆ. ಇಂತಹ ಪರಿಸ್ಥಿತಿಯಲ್ಲಿ ಪುನ: ಖಾಸಗಿ ಅವರಿಗೆ ಕೊಡುವುದಕ್ಕೆ ಟೆಂಡರ್ ಮೂಲಕ ಆಹ್ವಾನಿಸಲಾಗಿದೆ ಎಂದು ಕನ್ನಡ ಪ್ರಭ

ದಿನಪತ್ರಿಕೆಯಲ್ಲಿ ಬಂದಿದೆ. ಅಲ್ಲದೆ ಸದನ ಸಮಿತಿಯು ಸಹ ಇದನ್ನು ಖಾಸಗಿ ಅವರಿಗೆ ಕೊಡಬಾರದು, ಅದನ್ನು ಮಾನ್ಯಮೆಂಟಾಗಿ ಇಟ್ಟುಕೊಳ್ಳಬೇಕು ಎಂಬ ಸಲಹೆಯನ್ನು ಕೊಟ್ಟಿದೆ. ಹಿಂದೆ ಈ ಸದನದಲ್ಲಿ ''ಮೆಟ್ರೋಪೋಲ್ ಹೋಟೆಲಿನ ಮೇಲೆ ರಣಹದ್ದುಗಳ ಹಾರಾಟ ಎಂಬ ಪದವನ್ನು ತಾವು ಸಹ ಉಚ್ಚರಿಸಿದ್ದೀರಿ. ಈಗ ಆ ರಣಹದ್ದುಗಳ ಹಾರಾಟ'' ಎಂಬ ಪದವನ್ನು ತಾವು ಸಹ ಉಚ್ಚರಿಸಿದ್ದೀರಿ. ಈಗ ಆ ರಣಹದ್ದುಗಳ ಕೈಗೆ ಸಿಗುತ್ತಿದೆ, ಆದಕಾರಣ ದಯಮಾಡಿ ಅದನ್ನು ಮೈಸೂರಿನಿಂದ ಮಹಾರಾಣಿ ಕಾಲೇಜಿಗೋ, ಅಥವಾ ನಮ್ಮ ಕೆ ಎಸ್ ಟಿಡಿಗೊ ಪ್ರವಾಸೋದ್ಯಮ ಇಲಾಖೆಯವರಿಗೆ ಕೊಟ್ಟರೆ ಬಹಳ ಒಳ್ಳೆಯದಾಗುತ್ತದೆ. ಏಕೆಂದರೆ ಅದು ಮಹಾರಾಜರಿಂದ ಬಳುವಳಿಯಾಗಿ ಬಂದಿರುವಂತಹ ಕಟ್ಟಡ, ಇದು ನಿಜವಾದ ಸಾಂಸ್ಕೃತಿಕ ಹಿನ್ನೆಲೆಯನ್ನು ಸಹ ಹೊಂದಿಕೊಂಡಿರುತ್ತದೆ ಎಂಬ ವಿಷಯವನ್ನು ತಿಳಿಯಬಯಸುತ್ತೇನೆ. ಆದಕಾರಣ ಈ ಹೋಟೆಲ್ ಅನ್ನು ಟೆಂಡರ್ ಮುಖಾಂತರ ಖಾಸಗಿಯವರಿಗೆ ಕೊಡಬಾರದು ಎಂದು ತಮ್ಮಲ್ಲಿ ಕಳಕಳಿಯಿಂದ ಬೇಡಿಕೊಳ್ಳುತ್ತೇನೆ.

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು): ಹೋಟೆಲ್ ಮೆಟ್ರೋಪೋಲ್ ಮತ್ತು ಕೆ ಆರ್ ಎಸ್ ಹೋಟೆಲ್‌ಗಳನ್ನು ಹಿಂದೆ ಖಾಸಗಿ ಅವರಿಗೆ ಲೀಸ್ ಆಧಾರದ ಮೇಲೆ ನೀಡಲಾಗಿತ್ತು. ಅದನ್ನು ಪುನ: 1996ರಲ್ಲಿ ಸರ್ಕಾರ ವಾಪಸ್ಸು ಪಡೆಯಲಾಯಿತು. ನಂತರ ಇದನ್ನು ಪ್ರವಾಸೋದ್ಯಮ ಇಲಾಖೆಗೆ ಕೊಡಬೇಕೆಂದು ಪ್ರಸ್ತಾಪ ಮಾಡಲಾಗಿತ್ತು. ಇದರ ಬಗ್ಗೆ ತೀರ್ಮಾನ ಕೈಗೊಳ್ಳಲು 1997ರ ಮೇ ತಿಂಗಳಲ್ಲಿ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಿದ್ದ ಸಮಿತಿಯು, ಈ ಹೋಟೆಲ್‌ಗಳು ಸರ್ಕಾರದ ಮುಖ್ಯ ಸ್ವತ್ತುಗಳಾಗಿದ್ದು, ಹಾಗೂ ಇದು ಮೈಸೂರಿನಲ್ಲಿ ಒಳ್ಳೆಯ ಕೇಂದ್ರ ಸ್ಥಾನದಲ್ಲಿದ್ದು ಇವುಗಳಿಗೆ ಗುತ್ತಿಗೆ ಕರೆದು, ಖಾಸಗಿ ಉದ್ಯಮಿಗಳಿಗೆ ನೀಡಿದ್ದಲ್ಲಿ ಲಾಭದಾಯಕವಾಗುವುದು ಎಂಬ ಅಭಿಪ್ರಾಯ ಪಟ್ಟಿತ್ತು. ಮೇಲಿನ ಎಲ್ಲಾ ಸಾಧಕ-ಬಾಧಕಗಳನ್ನು ಕೂಲಂಕಷವಾಗಿ ಚರ್ಚಿಸಿ ಪರಿಶೀಲಿಸಿದ ನಂತರ ಸಚಿವ ಸಂಪುಟವು 1997ರ ಅಕ್ಟೋಬರ್‌ನಲ್ಲಿ ಖಾಸಗಿಯವರಿಗೆ ಗುತ್ತಿಗೆ ಕರೆದು ಹೋಟೆಲ್ ವಹಿಸಿಕೊಡಲು ತೀರ್ಮಾನಿಸಲಾಗಿತ್ತು. ಇದರಂತೆ ಗುತ್ತಿಗೆ ಕರೆದು ತೀರ್ಮಾನಿಸಬೇಕಾದ ಪೂರ್ವಭಾವಿ ಕ್ರಮವನ್ನು ನಿರ್ಧರಿಸಲು ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಎಲ್ಲಾ ಸಂಬಂಧಪಟ್ಟ ಇಲಾಖೆಗಳ ಜೊತೆಯಲ್ಲಿ ಒಂದು ಸಮಿತಿ ರಚಿಸಿದ್ದು, ಅದು ಗುತ್ತಿಗೆದಾರರಿಗೆ ನೀಡಬೇಕಾಗಿದ್ದ ವಿವರಗಳು, ಅವರ ಯೋಗ್ಯತೆಗಳು ಮತ್ತು ಇತ್ಯಾದಿಗಳನ್ನು ಪರಿಶೀಲಿಸಿ ಅನುಮೋದಿಸಿದ ನಂತರ ವೃತ್ತ ಪತ್ರಿಕೆಗಳಲ್ಲಿ ಸಾಕಷ್ಟು ಪ್ರಚಾರ ಹಾಗೂ ಕಾಲಾವಕಾಶ ಕೊಟ್ಟು ಈ ಪ್ರಕಟಣೆ ನೀಡಲಾಗಿತ್ತು. ಹಾಗೂ ಅದರಂತೆ 30.3.98 ರಂದು ಗುತ್ತಿಗೆ ಪಡೆದು ಕೊನೆಯ ದಿನವೆಂದು ಪರಿಗಣಿಸಲಾಗಿದೆ. ಈ ಪ್ರಕಟಣೆಯಂತೆ 22 ಜನ ಗುತ್ತಿಗೆ ವಿಧಿಗಳನ್ನು ಖರೀದಿಸಿದ್ದು, ಅದರಲ್ಲಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಇಲಾಖೆಯೂ ಸಹ ಸೇರಿರುತ್ತದೆ. ಈ ವಿಷಯದ ವಿಚಾರವಾಗಿ 12.3.98 ರಂದು ಪ್ರೀ ಬಿಡ್ಡ್ ಸಭೆ ಕರೆದು ಭಾಗವಹಿಸಿದ ಎಲ್ಲರಿಗೂ ವಿವರಗಳನ್ನು ನೀಡಲಾಗಿದೆ. ಈ ಪರಿಸ್ಥಿತಿಯಲ್ಲಿ ನೇರವಾಗಿ ಕೆ ಎಸ್ ಟಿಡಿಸಿಗೆ ಹೋಟೆಲ್ ನೀಡಲು ಬರುವುದಿಲ್ಲ. ಹೋಟೆಲ್ ಮೆಟ್ರೋಪೋಲ್ ಮತ್ತು ಅದರ ಸುತ್ತ ಮುತ್ತ ಮೈಸೂರಿನ ವಾಣಿಜ್ಯ ಕೇಂದ್ರವಿದ್ದು, ಇದು ಜನನಿಬಿಡ ಪ್ರದೇಶದಲ್ಲಿ ಇರುವುದರಿಂದ ಇದನ್ನು ಶಿಕ್ಷಣ ಇಲಾಖೆಗೆ ನೀಡಲು ಬರುವುದಿಲ್ಲ. ಗುತ್ತಿಗೆದಾರರನ್ನು ನೇಮಿಸುವಾಗ, ಆರ್ಥಿಕವಾಗಿ ಮತ್ತು ಹೋಟೆಲ್ ನಡೆಸಲು ಪರಿಣತಿ ಇರುವವರನ್ನು ಗುರುತಿಸಿ ನಂತರ ಇದರಲ್ಲಿ ಸರ್ಕಾರಕ್ಕೆ ಲಾಭದಾಯಕವಾಗುವಂತೆ ಗುತ್ತಿಗೆ ನೀಡಲು ಸರ್ಕಾರಕ್ಕೆ ಕಷ್ಟವಾಗುವುದಿಲ್ಲ.

ಅಧ್ಯಕ್ಷರು : ತಾವು ಸಹಕರಿಸಬೇಕು.

ಶ್ರೀ ಹೆಚ್. ಎಸ್. ಶಂಕರ್‌ಲಿಂಗೇಗೌಡ : ಸದನ ಸಮಿತಿ ಮಾಡಿದ ಶಿಫಾರಸ್ಸಿಗೆ ತಾವು ಕಿಂಚಿತ್ತು ಆದರೂ ಬೆಲೆ ಕೊಡುವುದಿಲ್ಲವೇ? ಪಕ್ಕದಲ್ಲೇ ಮಹಾರಾಣಿಸ್ ಕಾಲೇಜು ಇದೆ.

ಅಧ್ಯಕ್ಷರು : ತಾವು ದಯಮಾಡಿ ಆಮೇಲೆ ನನ್ನ ಆಫೀಸಿಗೆ ಬನ್ನಿ, ಅವರನ್ನು ಕರೆಯಿಸುತ್ತೇನೆ, ನೀವು ಏನು ಕೇಳಿರುವಿರಿ, ಅದಕ್ಕೆ ಅವರು ತದ್ ವಿರುದ್ಧವಾಗಿ ಉತ್ತರ ಕೊಟ್ಟಿದ್ದಾರೆ, ಬೇರೆ ಯಾವ ರೂಪದಲ್ಲಿ ಅದನ್ನು ಸದನದಲ್ಲಿ ಪ್ರಸ್ತಾಪ ಮಾಡಬೇಕು ಅದರಂತೆ ನಾನು ಅವಕಾಶ ಮಾಡಿಕೊಡುತ್ತೇನೆ.

ಎ) ಮಂಗಳೂರಿನಲ್ಲಿ ವಿದ್ಯುತ್ ಕಡಿತದ ಬಗ್ಗೆ

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಅಧ್ಯಕ್ಷರೆ, ಕೆ ಇ ಬಿ ಲೋಡ್ ಡಿಸ್‌ಪ್ಯಾಚ್ ಸೆಕ್ಷನ್‌ನ ಅಧಿಕಾರಿಗಳು ಒಂದು ತಾರತಮ್ಯ ನೀತಿಯನ್ನು ಅನುಸರಿಸುತ್ತಾ ಇದ್ದಾರೆ. ಬೆಂಗಳೂರಿನಲ್ಲಿ, ಮೈಸೂರಿನಲ್ಲಿ ಅಥವಾ ರಾಜ್ಯದ ಪ್ರಮುಖ ನಗರಗಳಲ್ಲಿ ಇಲ್ಲದಂತಹ ರಾತ್ರಿ ವೇಳೆಯ ವಿದ್ಯುತ್ ಕಡಿತ ಮಂಗಳೂರಿನಲ್ಲಿ ಮಾತ್ರ ಸತತವಾಗಿ ಮಾಡುತ್ತಿದ್ದಾರೆ. ಕಳೆದ ಕೆಲವು ದಿವಸಗಳಿಂದ ರಾತ್ರಿ ಹತ್ತು ಗಂಟೆಯಿಂದ ಬೆಳಿಗ್ಗೆ ಐದು ಗಂಟೆಯವರೆಗೆ ಸತತವಾಗಿ ವಿದ್ಯುತ್ ಕಡಿತವಾಗುತ್ತಿದೆ. 15ಮೆ.ವ್ಯಾ.ಗಿಂತ ಹೆಚ್ಚಿನ ವಿದ್ಯುತ್ ಕಡಿತ ಮಾಡಬೇಕೆಂಬ ಆದೇಶವನ್ನು ಸಹ ಹೊರಡಿಸಿದ್ದಾರೆ. ಆದ್ದರಿಂದ ಈ ರೀತಿಯಾದಂತಹ ತಾರತಮ್ಯವನ್ನು ಮಾಡುವುದು ಸರಿಯಲ್ಲವೆಂದು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಶರಣಬಸಪ್ಪ ದರ್ಶನಾಪುರ (ವಿದ್ಯುತ್ ಖಾತೆ ರಾಜ್ಯ ಸಚಿವರು) :- ಅಧ್ಯಕ್ಷರೇ, ಲೋಕಲ್‌ನಲ್ಲಿ ಸ್ವಲ್ಪ ಪ್ರಾಬ್ಲಂ ಇರುವುದರಿಂದ ಹಾಗಾಗಿದೆ. ಇನ್ನು ಒಂದೆರಡು ದಿವಸದಲ್ಲಿ ಇಲಾಖೆಯಿಂದ ಅದನ್ನು ನಿವಾರಿಸಿಕೊಡುತ್ತೇವೆ.

ಐ) ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಟೌನ್ ಪಂಚಾಯತಿಯನ್ನು ರದ್ದುಗೊಳಿಸುವುದು.

ಶ್ರೀ ಸಿ. ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಅಧ್ಯಕ್ಷರೇ, ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಟೌನ್ ಪಂಚಾಯಿತಿ ರದ್ದುಗೊಳಿಸುವ ಬಗ್ಗೆ ಜಿಲ್ಲಾಧಿಕಾರಿಗಳು ಶಿಫಾರಸ್ ಮಾಡಿದ್ದರೂ ಸಹ ಇಲ್ಲಿಯವರೆಗೂ ಸರ್ಕಾರ ಯಾವುದೇ ತೀರ್ಮಾನ ತೆಗೆದುಕೊಳ್ಳದಿರುವ ಬಗ್ಗೆ ಸರ್ಕಾರದ ಗಮನಕ್ಕೆ ತರುವಂಥದೇನೆಂದರೆ ಬಹಿರಂಗವಾಗಿ ನಿವೇಶನಗಳನ್ನು ಹರಾಜು ಮಾಡಿರುವ ಸಂದರ್ಭದಲ್ಲಿ ಮುಖ್ಯ ಅಧಿಕಾರಿಗಳ ನಾದಿನಿಯ ಹೆಸರಿನಲ್ಲಿ ಅನಧಿಕೃತವಾಗಿ ತೆಗೆದುಕೊಂಡಿರುವ ನಿದರ್ಶನ ಸರ್ಕಾರಕ್ಕೆ ಜಿಲ್ಲಾಧಿಕಾರಿಗಳು ವರದಿ ಮಾಡಿರುತ್ತಾರೆ. ಬಹಿರಂಗ ಮಳಿಗೆ ಹರಾಜಿನ ವಿಚಾರದಲ್ಲಿ ಅವ್ಯವಹಾರ ನಡಿದಿದೆ ಎಂಬ ಬಗ್ಗೆ ಸರ್ಕಾರಕ್ಕೆ ವರದಿ ಕಳುಹಿಸಿರುತ್ತಾರೆ. ನಾಗರೀಕ ಸವಲತ್ತುಗಳನ್ನು ಒದಗಿಸಿಕೊಡುವುದರಲ್ಲಿ ಈ ಪಟ್ಟಣ ಪಂಚಾಯಿತಿ ವಿಫಲವಾಗಿದೆ ಎಂಬ ಬಗ್ಗೆ ಸಹ ಸರ್ಕಾರಕ್ಕೆ ವರದಿ ಸಲ್ಲಿಸಿಯಾಗಿದೆ. ಜಿಲ್ಲಾಧಿಕಾರಿಗಳು ನೇರವಾಗಿ ನಿಯಮ 316ರ ಪ್ರಕಾರ ಈ ಪಟ್ಟಣ ಪಂಚಾಯಿತಿಯನ್ನು ರದ್ದು ಮಾಡಬೇಕೆಂದು ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದಾರೆ. ಇದಾಗಿ 6 ತಿಂಗಳಾದರೂ ಇಲ್ಲಿಯವರೆಗೆ ಯಾವುದೇ ತರಹದ ಉತ್ತರ ಸಾರ್ವಜನಿಕರಿಗೆ ಸಿಕ್ಕದೇ ಇರುವ ಕಾರಣ ಸರ್ಕಾರ ನಿಯಮ 316ರ ಅಡಿ ಪಟ್ಟಣ ಪಂಚಾಯಿತಿಯನ್ನು ರದ್ದುಗೊಳಿಸುವಂತೆ ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.